ಇರ್ತದೆ. ನೀನು ನಿನ್ ದಾರಿ ನೋಡ್ಕೋಬೇದು' ಎಂದು ನಿಷ್ಕರುಣೆಯಿಂದ ಗಟ್ಟಿಯಾಗಿ ಹೇಳಿಬಿಟ್ಟರು.

'ನಿಮ್ಮ ಪ್ರತಿಷ್ಠೆ ನಿಮ್ಗೆ ಇರ್ಲಿ ನಂಗೆ ಬೇಡ, ಲೋಕದಲ್ಲಿ ನಿಮ್ದೊಬ್ರೆ ಮೇಳ ಇರುದಲ್ಲ, ನಂಗೆ ಕ್ಷೇತ್ರದಲ್ಲಿ ಬೇಕಾದಷ್ಟು ಮಾರ್ಕೆಟ್ ವ್ಯಾಲ್ಯೂ ಇದೆ' ಎಂದು ಗಿರಿಧರ ಕೊಂಚ ಕುಡಿದ ಮತ್ತಿನಲ್ಲಿ ದಡಬಡಿಸಿ ಮಾತಾಡಿಬಿಟ್ಟ. ಅಲ್ಲಿಗೆ ಪ್ರತಿಷ್ಠಿತ ಡೇರೆ ಮೇಳದಲ್ಲಿ ಗಿರಿಧರನ ಮೂರು ವರ್ಷದ ಯಾನಕ್ಕೆ ತೆರೆಬಿತ್ತು. ಆದರೆ ಅವನು ಅಂದುಕೊಂಡ ಹಾಗೆ ಯಾವುದೂ ನಡೆಯಲಿಲ್ಲ, ಮಾರ್ಕೆಟ್ ವ್ಯಾಲ್ಯೂಗಿಂತ, ಅವನಿಗೆ ಅಹಂಕಾರವಂತೆ, ಯಜಮಾನ್ರಿಗೆ ಉಲ್ಟಾ ಮಾತಾಡ್ತಾನಂತೆ, ಬೇರೆ ಕಲಾವಿದರನ್ನು ಬೆಳಿಲಿಕ್ಕೆ ಬಿಡಲ್ಲಂತೆ, ಎಲ್ಲರಿಗೂ ಕುಡಿಯುದನ್ನು ಕಲಿಸ್ತಾನಂತೆ, ಮನೆಯಲ್ಲಿ, ಡೇರೆಯಲ್ಲಿ, ರಂಗದಲ್ಲೂ ಕುಡಿದು ಬರ್ತಾನಂತೆ ಎನ್ನುವ ಕುಖ್ಯಾತಿಯೇ ಎಲ್ಲೆಲ್ಲೂ ಹರಡಿದ್ದರಿಂದ ಯಾವ ಪ್ರತಿಷ್ಠಿತ ಮೇಳದವರೂ ಇವನ ಉಸಾಬರಿಯೇ ಬೇಡೆನ್ನುವಂತೆ ಇವನನ್ನು ಮೂಸಿಯೂ ನೋಡಲಿಲ್ಲ.

ತನ್ನ ಸ್ವರಕ್ಕೆ ದೊಡ್ಡ ದೊಡ್ಡ ಮೇಳದವರು ಕಂಬಳಿಹಾಸು ಹಾಕಿ ಕರೀತಾರೆ ಎಂದುಕೊಂಡಿದ್ದ ಗಿರಿಧರನಿಗೆ ತಲೆ ಮೇಲೆ ಕಲ್ಲು ಚಪ್ಪಡಿಯೊಂದು ಬಿದ್ದಂತಹ ಅನುಭವವಾಯ್ತು. ಆದರೆ ಪುಟ್ಟಪುಟ್ಟ ಕೊಳದ ಮೀನುಗಳಂತಿದ್ದ ಜನರ ಬಾಯಿಯಿಂದ, ಬೂಸ್ ಎಂದು ಕರೆಸಿಕೊಳ್ಳುವ ಕೆಲವೊಂದು ಲೋಕಲ್ ಮೇಳಗಳು, 'ನಮ್ಮಲ್ಲಿ ಬನ್ನಿ ನಮ್ಮಲ್ಲಿ ಬನ್ನಿ' ಎಂದು ಕರೆದರು. ಅಂತಹ ಮೇಳಗಳು ತನ್ನಂತಹ ಪ್ರತಿಷ್ಠಿತನಿಗಲ್ಲ ಎಂದುಕೊಂಡು ಸುಮ್ಮನಾದ. ಬೇರೆ ಪುಟ್ಟದೊಂದು ಕೊಠಡಿ ಮಾಡಿಕೊಂಡು ಎಲ್ಲಿಯೂ ಹೋಗದೇ ಒಬ್ಬನೇ ಉಳಿದುಬಿಟ್ಟ. ಎಲ್ಲೂ ಅವಕಾಶಗಳೇ ಸಿಗದಿದ್ದರಿಂದ ತಲೆಬಿಸಿಯಾಗಿ ಕುಡಿಯುವುದು ವಿಪರೀತವಾಯ್ತು. ಹಾಗೆ ಕುಡಿದು...'ಅಂಗನಾ ಮಣಿ ನಿಲ್ಲು ನಿಲ್ಲೆಲೆ, ಎಲ್ಲೆಲ್ಲೂ ಸೊಬಗಿದೆ, ನವಿಲು ಕುಣಿಯುತಿದೆ ನೋಡಾ' ಎಂದೆಲ್ಲಾ ಪದ್ಯಗಳನ್ನು ಬೊಬ್ಬಿಡಿದು ಹಾಡುತ್ತಿದ್ದ, ಕುಣಿಯುತ್ತಲೂ ಇದ್ದ.

ಗಿರಿಧರನ ಮಹಾತ್ಮೆಗಳು ಎಲ್ಲಾ ಊರಿಗೂ ಹರಡಿರುವಾಗ, ಮೊದಲು ಅವನಿಗೆ ಭಾಗವತಿಕೆಯ ದಾರಿ ತೋರಿದ್ದ ಅಣ್ಣಪ್ಪ ನಾಯ್ಕರ ಕಿವಿಗೂ ಯಾವತ್ತೋ ಬಿದ್ದಿತ್ತು.

ಹಾಗೆ ನೋಡಿದರೆ ಅವನನ್ನು ಮೇಳದಿಂದ ತೆಗೆದು ಹಾಕುವಂತೆ ಮಾಡುವಲ್ಲಿ ಅಣ್ಣಪ್ಪ ನಾಯ್ಕರ ಪಾತ್ರವೂ ಉಂಟು. ಮೇಳದ ಯಜಮಾನ ಶಿವಾನಂದ ನಾಯ್ಕರು, ಅಣ್ಣಪ್ಪ ನಾಯ್ಕರ ಬಾಲ್ಯದ ಸಹಪಾಠಿಯಾಗಿದ್ದವರು. ಅವರೊಮ್ಮೆ ಅದು ಇದು ಮಾತಾಡುವಾಗ, 'ನಮಗೀಗ ಭಾಗವತರದ್ದೇ ದೊಡ್ಡ ತಲೆಬಿಸಿಯಾಗಿದೆ ಅಣ್ಣಪ್ಪ, ಆ ಹುಡುಗ ಚಿಕ್ಕಪ್ರಾಯದಲ್ಲೇ ಕುಡಿತ ಶುರು ಮಾಡಿ ನಮ್ಮ ಮೇಳದ ಹೆಸ್ರೂ ಹಾಳು ಮಾಡಿದ್ದಾನೆ. ಎಂತ ಮಾಡುದು ಗೊತ್ತಾಗುದಿಲ್ಲ, ಅವನನ್ನು ಮೇಳದಿಂದ ಬಿಡಿಸುದಷ್ಟೇ ದಾರಿ' ಎಂದು ಅಲವತ್ತುಕೊಂಡಾಗ, ಅಣ್ಣಪ್ಪ ನಾಯ್ಕರಿಗೆ ಗಾಬರಿ ಏನೂ ಆಗಲಿಲ್ಲ, ಯಾಕೆಂದರೆ ಗಿರಿಧರ ಹೀಗಾಗಿದ್ದಾನೆ ಅಂತ ಅವರು ಯಾವತ್ತೋ ಅವರಿವರಿಂದ ಕೇಳಿ ನೊಂದುಕೊಂಡಿದ್ದರು.

'ನೋಡು ಶಿವಾನಂದ, ಕಲೆಯೇ ಎಲ್ಲಕ್ಕಿಂತ ದೊಡ್ಡದ್ದು, ವ್ಯಕ್ತಿ ಯಾವತ್ತಿದ್ದರೂ ಸಣ್ಣವ. ಆ ಸಣ್ಣ ವ್ಯಕ್ತಿ, ಬೆಟ್ಟದಂತಿರುವ ಕಲೆಯ ಬೆಲೆ ತಿಳಿಯದೇ ಅದನ್ನು ಹಾಳು ಮಾಡಿದರೆ, ಅವನೆಷ್ಟೇ ದೊಡ್ಡ ಸ್ವರದವನೇ ಆಗಿರ್ಲಿ, ಅವನಿಗೆ ಪಾಠ ಕಲಿಸ್ಲೇಬೇಕು. ಗಿರಿಧರ ಇನ್ನೂ ಬೆಳಿತಿರೋ ಹುಡುಗ. ಲೋಕಕ್ಕೆಲ್ಲಾ ತಾನೇ ದಾರಿ ಎನ್ನುವಂತಿದ್ದಾನೆ. ಅವನು ಎಷ್ಟು ಅಲ್ಪ ಈ ಜಗತ್ತಲ್ಲಿ ಅಂತ ಅವನಿಗೆ ತಿಳಿಬೇಕಾದ್ರೆ, ಮುಂದೆ ಅವನು ನಿಜವಾದ ಕಲಾವಿದನಾಗಬೇಕಾದ್ರೆ, ಈಗ ಅವನಿಗೆ ಪಾಠ ಹೇಳಿಕೊಡ್ಲೇಬೇಕು' ಅದಕ್ಕೆ ಮೇಳದ ಪಾವಿತ್ರ್ಯತೆ ಹಾಳಾಗದ ಹಾಗೆ ಮೇಳದಿಂದ ತೆಗೆದುಬಿಡುದೇ ಒಳ್ಳೇದು' ಎಂದರು ಅಣ್ಣಪ್ಪ ನಾಯ್ಕರು. ಶಿವಾನಂದ ನಾಯ್ಕರಿಗೂ ಇದು ಹೌದೆನ್ನಿಸಿ ಗಿರಿಧರನನ್ನು ಮೇಳದಿಂದ ಬಿಡಿಸಿದ್ದರು.



ಕೆಲವು ಕಾಲ ಗಿರಿಧರನನ್ನು ಅವನ ಪಾಡಿಗೇ ಬಿಟ್ಟ ಅಣ್ಣಪ್ಪ ನಾಯ್ಕರು, ಒಂದು ದಿನ ಅವನ ಕೋಣೆಗೆ ಹೊಕ್ಕರು. ಆ ಕೋಣೆಯೂ ಗಿರಿಧರನ ಭವಿಷ್ಯವು ಚೂರು ಚೂರಾಗುತ್ತಿದೆ ಎನ್ನುವ ಸಂಕೇತದಂತೆ ಚೆಲ್ಲಾಪಿಲ್ಲಿಯಾಗಿತ್ತು. ಅಣ್ಣಪ್ಪ ನಾಯ್ಕರನ್ನು ನೋಡಿದವನೇ, ಕೋಣೆಯ ಯಾವುದೋ ಮೂಲೆಯಲ್ಲಿದ್ದ ಗಿರಿಧರ